Replies due to Questions etc by Government

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮನ್ನು ಅನಾವಶ್ಯಕವಾಗಿ ಇತ್ಯಟ್ಟಿಗೆ ಸಿಕ್ಕಿಸಬೇಕಾಗುತ್ತಿದೆ. ಆದುದರಿಂದ ತಾವು ಸರ್ಕಾರಕ್ಕೆ ಛೀಮಾರಿ ಹಾಕಿ ತಕ್ಷಣ ಉತ್ತರ ಕೊಡಬೇಕೆಂದು ಆದೇಶ ಕೊಡಬೇಕು. ಇಲ್ಲದೆ ಇದ್ದರೆ ಸರ್ಕಾರ ಎಷ್ಟೆರಗೊಳ್ಳುವುದಿಲ್ಲ.

ಶ್ರೀ ಹೆಚ್ ಎಂ. ಚನ್ನಬಸಪ್ಪ.—ವಿಧಿಯಮಗಳ ಪ್ರಕಾರ ಒಂದು ದಿವಸಕ್ಕೆ ಬಂದು ಗಮನ ಸೆಳೆಯುವ ಸೂಚನೆಯನ್ನು ಒಂದೊಂದು ದಿವಸಕ್ಕೆ ಹಾಕುತ್ತ ಇದ್ದೇವೆ ಆದುದರಿಂದ ತುರ್ತಾವಶ್ಯಕವಾಗಿ ಸಭೆಗೆ ತೊಂದರೆ ಮಾಡಬೇಕೆಂದು ಗಮನ ಸೆಳೆಯುವ ಸೂಚನೆಗಳಿಗೆ ಉತ್ತರಗಳನ್ನು ಕೊಟ್ಟಿಲ್ಲವೆನ್ನುವ ಭಾವನೆ ತಪ್ಪು. ಬಹುಶಃ ಆ ವಿಷಯಗಳ ಬಗ್ಗೆ ಮಾಹಿತಿ ಪಡೆಯುವುದಕ್ಕೆ ಸ್ವಲ್ಪ ಕಾಲಾವಕಾಶವಾಗಿರಬಹುದು.

ಎಂಡನೆಯದು ಪ್ರಶ್ನೆಗಳ ವಿಷಯದಲ್ಲಿ ಕೆಲವು ಪ್ರಶ್ನೆಗಳಿಗೆ ತಕ್ಷಣದಲ್ಲಿಯೇ, ಸೆಕ್ರೆಟೇರಿಯೇಟ್‌ನಲ್ಲಿ ದೊರೆಯುವ ಮಾಹಿತಿಯಿಂದ ಉತ್ತರಿಸಬಹುದಾದರೆ, ಉತ್ತರಗಳನ್ನು ಕೊಡುತ್ತೇವೆ. ಒಂದೊಂದು ಬೇಳೆ ಸಂಸ್ಥಾನಾಮಳೆಯಿಂದ ಮಾಹಿತಿಯನ್ನು ಕೇಳತಕ್ಕ ಪ್ರಶ್ನೆಗಳು ಬರುತ್ತವೆ. ಅವುಗಳಿಗೆ ಮಾಹಿತಿಯನ್ನು ತರಿಸಿಕೊಡುವುದು ಸ್ವಲ್ಪ ಕಷ್ಟವಾಗುತ್ತದೆ. ಎಷ್ಟೇ ಕಷ್ಟವಾದರೂ ಚಿಂತೆ ಇಲ್ಲ. ಸಾಧ್ಯವಾದಷ್ಟು ಪ್ರಯತ್ನಮಾಡಿ ತಮಗೆ ಮಾನಸ್ಸಿಗೆ ಬೇಸರವಾಗದ ರೀತಿಯಲ್ಲಿ ಬೇಗ ಮಾಹಿತಿಯನ್ನು ಒದಗಿಸಿಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ

ಇದರ ಜೊತೆಗೆ ಈ ಅಧಿವೇಶನ ಆಗಿರುವಷ್ಟು ದಿವಸ ಹಿಂದೆ ಯಾವ ಕಾಲದಲ್ಲಿಯೂ ಆಗಿರಲಿಲ್ಲ. ಇಷ್ಟು ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆಗಳು ಮತ್ತು ವಿಶೇಷ ವಿಷಯಗಳು ಹಿಂದೆ ಬಂದಿರಲಿಲ್ಲ. ಇವುಗಳೆಲ್ಲದರ ಬಗ್ಗೆ ಸರ್ವ ಪ್ರಯತ್ನಮಾಡಿ ಮಾಹಿತಿಯನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ

ಶ್ರೀ ಬಿ. ವಿ ಕಕ್ಕಿಲ್ಲಾಯ.—೧೫ ದಿವಸಗಳೊಳಗಾಗಿ ಉತ್ತರಗಳನ್ನು ಒಳುಹಿಸುವುದಕ್ಕೆ ಆಗದೆ ಹೋದರೆ ಇನ್ನಷ್ಟು ದಿನಸ ಅವಕಾಶಬೇಕೆಂದು ಅಧ್ಯಕ್ಷರಿಗೆ ತಿಳಿಸಿದರೆ ಅವರಿಗಾದರೂ ಸದನದ ಕಾರ್ಯಾಕಲಾಪ ನಡೆಸುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದು ಒಂದು ಒಳ್ಳೆಯ ಸಲಹೆ.

Inamati lands distribution in Tiptur

ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).—ಇನಾಂ ರದ್ದಿಯಾತಿ ಮಸೂದೆ ಜಾರಿಗೆ ಬಂದ ನಂತರ ನಮ್ಮ ತಾಲ್ಲೂಕಿನಲ್ಲಿ ಇನಾಂತಿ ಜಮೀನನ್ನು ಅನುಭವಿಸಿಕೊಂಡು ಬರುತ್ತಿರುವವರಿಗೆ ಕರುಳಕುಳ ಬಾಸ್ತಿಯಾಗಿದೆ ಒಂದು ಗ್ರಾಮದಲ್ಲಿ ಬೇರೆಯವರು ಸೇರಿ, ಗೌರವಮಾತಿ ಇನಾಂತಿ ಭೂಮಿಯನ್ನು ಅಕ್ರಮಣಮಾತಿ ಜೀವಾಯ ಮಾಡುತ್ತಿದ್ದಾರೆ. ಈ ವಿಷಯವನ್ನು ಅನೇಕತಕ್ಕ ಸರ್ಕಾರಿ ಅಧಿಕಾರಿಗಳಿಗೆ ತಿಳಿಸಿದರೂ ಸಹಿತ ಸರ್ಕಾರಿ ಅಧಿಕಾರಿಗಳು ಜೀವವಾಚ್ಚಾರಿಯಾದ ಇದ್ದಾರೆ. ಈಗಾಗಲೇ ಮಳೆ ಬಂದಿದ್ದು ಬಿತ್ತನೆ ಮಾಡುವುದಕ್ಕೆ ತೊಂದರೆಯಾಗಿದೆ. ಆದಕ್ಕೆ ಸಂಬಂಧಪಟ್ಟ ಆರ್ಜಿ ಮಾನ್ಯ ರೆವಿನ್ಯೂ ಮಂತ್ರಿಗಳ ಮುಂದೆ ಇದೆ ಎಂದು ತಿಳಿದು ಬಂದಿದೆ. ಬೇಗ ಸರಿಪಾರ ಕೊಡಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

Mysore Land Reform (Amendment) Bill, 1973 as Reported by the J.S.C.—Consideration of Clauses.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೆ, ಸದ್ಯದು ಒಂದು ಕ್ರಿಮಿನಾಶೋಪಪತ್ತಿದೆ ನಿನ್ನೆ ಕಂದಾಯ ಸಚಿವರು ಭೂಸುಧಾರಣೆ ವಿಧೇಯಕದ ಮೇಲೆ ಆದರದೇ ಆಗಿ ಒಂದು ತಿದ್ದುಪಡಿಯನ್ನು ಮಂಡಿಸಿದ್ದಾರೆ. ಆ ತಿದ್ದುಪಡಿಯಲ್ಲಿ ವಿದ್ಯಾ ಸಂಸ್ಥೆಗಳು ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಒಂದು ಅಂಶವನ್ನು ಇಳವಡಿಸಿದ್ದಾರೆ. ವಿದ್ಯಾ ಸಂಸ್ಥೆಗಳು ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ತಿದ್ದುಪಡಿ ಬಿನಿಗೆ ಆ ಭಾಗದ ತಿದ್ದುಪಡಿಯನ್ನ ನಿಯಮಗಳ ಪ್ರಕಾರ ಸಂಪೂರ್ಣವಾಗಿ ಈ ಸದನ ತಿರಸ್ಕರಿಸಬೇಕು, ತಾವು ಕೂಡ ತಿರಸ್ಕರಿಸಬೇಕು. ಕಾರಣವೇನೆಂದರೆ ಈ ತಿದ್ದುಪಡಿ ಈ ಸದನದ ಹಾಗೂ ಜಾಯಿಂಟ್ ಸೆಲೆಕ್ಟ್ ಸಮಿತಿಯ ತೀರ್ಮಾನಕ್ಕೆ ತದ್ವಿರುದ್ಧವಾಗಿದೆ. ಸದನದಲ್ಲಿ ಆದ ತೀರ್ಮಾನದ ವಿರುದ್ಧ